# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಕೋರಮಂಗಲ ಉಪ–ವಿಭಾಗದ, ಜಕ್ಕಸಂದ್ರ ವಾರ್ಡ್ ಸಂಖ್ಯೆ–173 ದಿನಾಂಕ: 19–12–2020 ರಂದು ಡಿಸೆಂಬರ್–2020**

**ಮಾಹೆಯ ವಾರ್ಡ್ ಸಮಿತಿ ಸಭೆಯ ನಡವಳಿಗಳು**

ಶ್ರೀ ಸಂಜೀವ್‌ಕುಮಾರ್, ಸಹಾಯಕ ಕಾರ್ಯಪಾಲಕ ಅಭಿಯಂತರರು ಮತ್ತು ನೋಡಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು ವಾರ್ಡ್ ಸಂಖ್ಯೆ 173ರ ರವರ ಅಧ್ಯಕ್ಷತೆಯಲ್ಲಿ ಗ್ರಂಥಾಲಯ ಕಟ್ಟಡ, ಉದ್ಯಾನವನ ಹತ್ತಿರ, ಹೆಚ್.ಎಸ್.ಆರ್. 5ನೇ ಸೆಕ್ಟರ್, ಜಕ್ಕಸಂದ್ರ, (ಜಕ್ಕಸಂದ್ರ ವಾರ್ಡ್ ಕಛೇರಿ, ಬಿ.ಬಿ.ಎಂ.ಪಿ) ಬೆಂಗಳೂರು ದಿನಾಂಕ: 19.12.2020 ರಂದು ಬೆಳಗ್ಗೆ 10:30 ಗಂಟೆಗೆ ವಾರ್ಡ್ ಸಮಿತಿ ಸದಸ್ಯರುಗಳು ಹಾಗೂ ಸಂಬಂಧಿಸಿದ ಅಧಿಕಾರಿಗಳೊಂದಿಗೆ ನಡೆದ ಸಭೆಯ ನಡವಳಿಗಳು:

**ಹಾಜರಿದ್ದ ಸದಸ್ಯರು:–**

1. ಶ್ರೀಮತಿ. ಸರಸ್ವತ್ತಮ್ಮ
2. ಶ್ರೀಮತಿ. ಸಿ. ಕುಸುಮ
3. ಶ್ರೀ. ಜಿ.ಎಸ್. ಹೊಳ್ಳ
4. ಶ್ರೀ. ಸಾಜಿ ಜಾರ್ಜ್

**ಹಾಜರಿದ್ದ ಅಧಿಕಾರಿಗಳು:–**

1. ಶ್ರೀ ಪ್ರದೀಪ್ ಕುಮಾರ್, ಸದಸ್ಯ ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು, ವಾರ್ಡ್–173 ಜಕ್ಕಸಂದ್ರ
2. ಶ್ರೀ ಎಸ್. ನವಿನ್, ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ
3. ಶ್ರೀ ಗಂಗರಾಜ್.ಎ.ಎಸ್.ಐ, ಸಹಾಯಕ ಆರಕ್ಷಕ ನಿರೀಕ್ಷಕರು, ಮಡಿವಾಳ ಸಂಚಾರ ಪೋಲಿಸ್ ಠಾಣೆ
4. ಶ್ರೀ ಅರವಿಂದ್ .ಆರ್, ಕಿರಿಯ ಆರೋಗ್ಯ ಪರಿವೀಕ್ಷಕರು
5. ಶ್ರೀ ಜಯರಾಮ್ ನಾಯಕ್.ಕೆ., ಕೆಲಸ ಪರಿವೀಕ್ಷಕರು, ಬೆಸ್ಕಾಂ, ಹೆಚ್.ಎಸ್.ಆರ್ ಲೇಔಟ್
6. ಶ್ರೀ ಕರಿಯಪ್ಪ, ತೆರಿಗೆ ನಿರೀಕ್ಷಕರು
7. ಶ್ರೀ ಮಂಜುನಾಥ್ .ಡಿ ವಾರ್ಡ್ ಮಾರ್ಷಲ್

* * * * *

ಶ್ರೀ. ಸಂಜೀವ್‌ಕುಮಾರ್, ಸಹಾಯಕ ಕಾರ್ಯಪಾಲಕ ಅಭಿಯಂತರರು ಮತ್ತು ನೋಡಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು ವಾರ್ಡ್ ಸಂಖ್ಯೆ 173 ರವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ವಾರ್ಡ್ ಸಮಿತಿ ಸದಸ್ಯರುಗಳನ್ನು ಹಾಗೂ ವಾರ್ಡ್‌ನ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸಿದರು ಮತ್ತು ವಾರ್ಡ್ ವ್ಯಾಪ್ತಿಯಲ್ಲಿನ ಕುಂದು ಕೊರತೆಗಳು, ಅಭಿವೃದ್ಧಿ ಕಾಮಗಾರಿಗಳ ಬಗ್ಗೆ ಚರ್ಚಿಸಲು ತಿಳಿಸಿದರು.

ಶ್ರೀಮತಿ ಕುಸುಮ, ನಿವಾಸಿಗಳು ರವರು ಮಾತನಾಡಿ, 12ನೇ ಮತ್ತು 13ನೇ ಮುಖ್ಯರಸ್ತೆ, ಗ್ರೀನ್ ವ್ಯೂವ್ ಹಾಸ್ಪಿಟಲ್ ಹಿಂಭಾಗ ಬೀದಿನಾಯಿಗಳ ಹಾವಳಿ ಹೆಚ್ಚಾಗಿದ್ದು, ಸಂಬಂಧಪಟ್ಟ ಇಲಾಖೆಯವರ ಗಮನಕ್ಕೆ ತಂದು ಬೀದಿನಾಯಿಗಳ ಹಾವಳಿಯನ್ನು ತಪ್ಪಿಸುವಂತೆ ಸಭೆಯಲ್ಲಿ ಕೋರಿದರು

ಶ್ರೀಮತಿ ಸರಸ್ವತಮ್ಮ ರವರು ಮಾತನಾಡಿ, ಟೀಚರ್ಸ್ ಕಾಲೋನಿಯ ಆಟದ ಮೈದಾನದಲ್ಲಿ ಹಾಲಿ ಇರುವ ಶಿಲಾಶಾಸನ ಮುಂಭಾಗ ಅಳವಡಿಸಿರುವ ಹೊಸ ನಾಮಫಲಕವನ್ನು ಬೇರೆಡೆಗೆ ವರ್ಗಾಯಿಸಿ, ಅಳವಡಿಸುವಂತೆ ಸಭೆಯಲ್ಲಿ ತಿಳಿಸಿದರು.

10ನೇ 'ಎ' ಅಡ್ಡರಸ್ತೆಯಲ್ಲಿ ಒಳಚರಂಡಿ ಕಾಮಗಾರಿಯನ್ನು ಕೈಗೊಳ್ಳಲು ಕೋರಲಾಗಿ, ಸ್ಥಳದಲ್ಲಿಯೇ ಇದ್ದ ಬಿ.ಡಬ್ಲ್ಯೂ.ಎಸ್.ಎಸ್.ಬಿ. ಸಹಾಯಕ ಅಭಿಯಂತರರು ಆದ ಶ್ರೀ ನವೀನ್ ಕುಮಾರ್ ರವರು ಉತ್ತರಿಸಿ, ಹಾಲಿ ಟೆಂಡರ್ ಕರೆಯಲಾಗಿದ್ದು, ಗುತ್ತಿಗೆದಾರರು ಕಾರ್ಯಾದೇಶವನ್ನು ಪಡೆಯುವ ಹಂತದಲ್ಲಿದ್ದು, ಕಾಮಗಾರಿಯನ್ನು ಕೂಡಲೇ ಪ್ರಾರಂಭಿಸುವುದಾಗಿ ತಿಳಿಸಿದರು.



Scanned by CamScanner

ಶ್ರೀ ಕುಸುಮ ರವರು ಮಾತನಾಡಿ, ಸರ್ಜಾಪುರ ಮುಖ್ಯರಸ್ತೆಯ ಹೆಚ್.ಎಸ್.ಆರ್. 5ನೇ ಹಂತ ಹಾಗೂ ಹೆಚ್.ಎಸ್.ಆರ್. 6ನೇ ಹಂತ ಸಂಪರ್ಕಿಸಲು ಬಿ.ಡಿ.ಎ. ಫ್ಲೈ ಓವರ್ ಮೇಲ್ಸೇತುವೆಯನ್ನು ನಿರ್ಮಿಸುವಂತೆ ಹಾಗೂ 13ನೇ ಗ್ರೀನ್ ವ್ಯೂ ಹಾಸ್ಪಿಟಲ್ ಬಳಿ ಕಸ ವಿಂಗಡಣೆ ಮಾಡದೆ ಸುರಿಯುತ್ತಿರುವ ಬಗ್ಗೆ ಕ್ರಮ ಕೈಗೊಳ್ಳುವಂತೆ ಸಭೆಯಲ್ಲಿ ಕೋರಿದರು.

ಶ್ರೀಮತಿ. ಕುಸುಮ ರವರು 13ನೇ ಮುಖ್ಯರಸ್ತೆ, 7ನೇ ಅಡ್ಡರಸ್ತೆಯಲ್ಲಿ ಚರಂಡಿ ಬ್ಲಾಕ್ ಆಗಿರುವುದರಿಂದ ಚರಂಡಿಯಲ್ಲಿನ ಹೂಳು ತೆಗೆಯಲು ಕ್ರಮ ಕೈಗೊಳ್ಳುವಂತೆ ತಿಳಿಸಿದರು.

ಶ್ರೀ ಸಜೀ ಜಾರ್ಜ್ ರವರು ಮಾತನಾಡಿ, ವೆಂಕಟಾಪುರ ಮುಖ್ಯರಸ್ತೆಯ ಗ್ರಾಮರ್ ಇಂಗ್ಲೀಷ್ ಸ್ಕೂಲ್ ಬಳಿ ಬಿ.ಡಬ್ಲ್ಯೂ.ಎಸ್.ಎಸ್.ಬಿ. ಯ ಮ್ಯಾನ್‌ಹೋಲ್ ಮಟ್ಟವು ರಸ್ತೆಗಿಂತ ಎತ್ತರವಾಗಿದ್ದು, ವಾಹನ ಸಂಚಾರಕ್ಕೆ ತೊಂದರೆಯಾಗುತ್ತಿರುವುದರಿಂದ ಮ್ಯಾನ್‌ಹೋಲ್ ಮಟ್ಟವನ್ನು ರಸ್ತೆಯ ಮಟ್ಟಕ್ಕೆ ತರಬೇಕೆಂದು ಸಭೆಯಲ್ಲಿ ತಿಳಿಸಿದರು.

ಸರಗಳ್ಳತನ ಮತ್ತು ಇತರೆ ಅಪರಾಧ ಚಟುವಟಿಕೆಗಳನ್ನು ತಡೆಯಲು 13ನೇ ಮುಖ್ಯರಸ್ತೆಯಲ್ಲಿ ಪೋಲಿಸ್ ಸಿಬ್ಬಂಧಿಗಳು ಹೆಚ್ಚಾಗಿ ಗಸ್ತು ತಿರುಗುವಂತೆ ಸಭೆಯಲ್ಲಿ ತಿಳಿಸಿದರು.

ಕೊನೆಯದಾಗಿ ಮಾನ್ಯ ನೋಡಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು ಸಭೆಗೆ ಹಾಜರಾದ ಎಲ್ಲಾ ಸದಸ್ಯರು ಮತ್ತು ಅಧಿಕಾರಿಗಳಿಗೆ ವಂದನೆಗಳನ್ನು ತಿಳಿಸುತ್ತಾ, ಇಂದಿನ ಸಭೆಯಲ್ಲಿ ಚರ್ಚಿಸಿದ ವಿಷಯಗಳ ಬಗ್ಗೆ ಕೈಗೊಂಡಿರುವ ಕ್ರಮಗಳನ್ನು ಮುಂದಿನ ಸಭೆಯಲ್ಲಿ ಪೂರ್ಣ ಮಾಹಿತಿಯನ್ನು ಒದಗಿಸಬೇಕೆಂದು ಸದಸ್ಯ ಕಾರ್ಯದರ್ಶಿ ಮತ್ತು ಸಭೆಯಲ್ಲಿ ಹಾಜರಾಗಿದ್ದ ಎಲ್ಲಾ ಸಂಬಂಧಪಟ್ಟ ಇಲಾಖಾ ಅಧಿಕಾರಿಗಳಿಗೆ ತಿಳಿಸಿ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

19/12/2020.
(ಶ್ರೀ. ಪ್ರದೀಪ್ ಕುಮಾರ್ ಟಿ.ಬಿ.)
ಸದಸ್ಯ ಕಾರ್ಯದರ್ಶಿ
ಹಾಗೂ ಸಹಾಯಕ ಅಭಿಯಂತರರು,
ವಾರ್ಡ್-173 ಜಕ್ಕಸಂದ್ರ

19.12.2020
(ಶ್ರೀ. ಸಂಜೀವಕುಮಾರ್)
ನೋಡಲ್ ಅಧಿಕಾರಿಗಳು
ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು
ವಾರ್ಡ್-173 ಜಕ್ಕಸಂದ್ರ



Scanned by CamScanner



Scanned by CamScanner



Scanned by CamScanner



Scanned by CamScanner